(ಈ ಹಂತದಲ್ಲಿ ಮನೋಹರ್ ಕಲ್ಲಪ್ಪ ಕಿನೇಕರ್‌ರವರು ಬಾವಿಗೆ ಬಂದು ಧರಣಿ ಕುಳಿತರು)

ಅಧ್ಯಕ್ಷರು : ನಿಮಗೆ ವಿವರವಾಗಿ ಕ್ಲಾರಿಫಿಕೇಷನ್ ಕೇಳಲು ಅವಕಾಶ ಕೊಡುತ್ತೇನೆ, ಸಭೆ ಬಹಳ ಮುಖ್ಯ. ದಯಮಾಡಿ ಸಹಕರಿಸಬೇಕು. ಸಭೆಯ ಒಮ್ಮತದ ತೀರ್ಮಾನಕ್ಕೆ ವಿರೋಧ ಹೋಗಬಾರದು. ದಯಮಾಡಿ ಎಲ್ಲರೂ ಸಹಕರಿಸಬೇಕು. ಈಗ ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ.

7. ಪ್ರಕಟಣೆ:

ಅಧ್ಯಕ್ಷರು : ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶದಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 118ರ ಮೇರೆಗೆ ವಿಧಾನ ಪರಿಷತ್ತು "2006ರ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು" ಈ ದಿನ ದಿನಾಂಕ29.9.2006ರಂದು ಯಾವುದೇ ತಿದ್ದುಪಡಿಗಳಿಲ್ಲದೆ ಅನುಮೋದಿಸಿರುತ್ತದೆಂದು ತಿಳಿಸುತ್ತಾರೆ.

8. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ : ಬರ, ಡಾ: ನಂಜುಂಡಪ್ಪ ವರದಿಯ ಮೇಲೆ ಮಾತನಾಡಲು ಅವಕಾಶ ನೀಡುವ ಬಗ್ಗೆ.

ಶ್ರೀ ವಾಟಾಳ್‌ನಾಗರಾಜ್ : ನನಗೆ ಭಾಷಣ ಮಾಡಲು ಅವಕಾಶ ಇಲ್ಲವೆ?

ಅಧ್ಯಕ್ಷರು : ನಿಮಗೆ ನಾಯಕರು ವಿನಂತಿ ಮಾಡಿದ್ದಾರೆ.

ಶ್ರೀ ವಾಟಾಳ್‌ನಾಗರಾಜ್ : ತಾವು ಏನು ಹೇಳುತ್ತೀರೊ ಹೇಳಿ. ಸಭೆ ಒಂದು ತೀರ್ಮಾನಕ್ಕೆ ಬಂದಿದೆಯೆಂದು ಹೇಳಿದ್ದೀರಿ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ವಾಟಾಳ್ ನಾಗರಾಜ್‌ರವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ, ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಟ್ಟಮೇಲೆ ನಿಮಗೆ ಬೇರೆ ವಿಚಾರಗಳ ಬಗ್ಗೆ ಉತ್ತರ ಬೇಕು ಎಂದರೆ ಅನಂತರ ಕೊಡುತ್ತಾರೆ. ಆದ್ದರಿಂದ ತಾವು ಸಮಾಧಾನದಿಂದ ನಮಗೆ ಸಹಕಾರ ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇದೊಂದು ವಿಶೇಷ ಅಧಿವೇಶನವೆಂದು ನೀವು ಕರೆದಿದ್ದೀರಿ. ಇಲ್ಲಿ ಅಧಿವೇಶನ ನಡೆಯಬೇಕೆಂದು ಕಳೆದ ಹತ್ತಾರು ವರ್ಷಗಳಿಂದ ಹೋರಾಟ ಮಾಡಿದವರು ನಾವು. ಇಲ್ಲಿ ಅಧಿವೇಶನ ನಡೆಸಿದ ಮೇಲೆ ತಾವು ನನಗೆ ಅವಕಾಶ ಕೊಟ್ಟಾಗ ಕೆಲವು ವಿಚಾರಗಳನ್ನು ಗಡಿ, ನಾಡು, ನುಡಿ, ನೆಲ, ಜಲ ರಾಜ್ಯದ ಸಮಗ್ರ ಚಿಂತನೆ ಬಗ್ಗೆ, ಕರ್ನಾಟಕದ ಏಕೀಕರಣದ ಬಗ್ಗೆ 10 ನಿಮಿಷ ಮಾತನಾಡಬೇಕೆಂದು ಹೇಳಿದಾಗ ನೀವು ಅದಕ್ಕೆ ಬೇಡವೆಂದು ಹೇಳುತ್ತಿದ್ದೀರಿ. ವಿರೋಧ ಪಕ್ಷದ ನಾಯಕರು ಬೇಡವೆಂದು ಹೇಳಿದರು. ಎಲ್ಲರೂ ಬೇಡವೆಂದು ಹೇಳಿದಾಗ ಈ ಸದನದಲ್ಲಿ ನಾನು ಇರತಕ್ಕದ್ದು ಗೌರವವಲ್ಲ. ಆದ್ದರಿಂದ ನಾನು ಈ ಸದನವನ್ನು ಬಹಿಷ್ಕರಿಸಿ ಹೊರಗಡೆ ಹೋಗುತ್ತಿದ್ದೇನೆ.